ನೀರಿನ ಯೋಜನೆಗಳನ್ನು ಪುನಃಶ್ಚೇತನಗೊಳಿಸುವುದು ಮತ್ತು ಅನಿವಾರ್ಯವಾದಲ್ಲಿ ಹೊಸ ಕೊಳವೆಬಾವಿಗಳನ್ನು ಕೊರೆಯುವಂತಹ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯಿತಿಗಳು ಕ್ರಮ ವಹಿಸುತ್ತವೆ. ಜೊತೆಗೆ, ತಾಲ್ಲೂಕುಮಟ್ಟದ ಕಂಟ್ರೋಲ್ ರೂಂಗಳು ಕುಡಿಯುವ ನೀರಿನ ಸಮಸ್ಯೆಗಳಿಗೆ ಕ್ಷಿಪ್ರ ಪರಿಹಾರದೊಂದಿದೆ ಸ್ಪಂದಿಸಲಿವೆ.

ಆ) 2010– 11 ರ ಸಾಲಿನಲ್ಲಿ, ಟಾಸ್ಕ್ ಫೋರ್ಸ್ ಮುಖೇನ ಕುಡಿಯುವ ನೀರಿನ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ರೂ.19.10 ಕೋಟಿ ಅನುದಾನವನ್ನು 30 ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

ಗ್ರಾಮೀಣ ರಸ್ತೆಗಳ ದುರಸ್ತಿ ಬಗ್ಗೆ

36(217): ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಭಾಗದ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 2009– 10 ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ನಿಗದಿಪಡಿಸಿದ್ದ ಅನುದಾನದ ಮೊತ್ತ ಎಷ್ಟು ಮತ್ತು ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು? (ವಿವರಗಳನ್ನು ನೀಡುವುದು);

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) 2009–10ನೇ ಸಾಲಿನಲ್ಲಿನ ಯೋಜನೆಗಳಡಿಯಲ್ಲಿ ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರಕ್ಕೆ ಲೆಕ್ಕ ಶೀರ್ಷಿಕೆ 3054 ರಸ್ತೆ ಮತ್ತು ಸೇತುವೆಗಳು, ಸುವರ್ಣ ಗ್ರಾಮ ಯೋಜನೆ, ಕೆ.ಎಲ್.ಎಲ್ ಎ.ಡಿ.ಪಿ (ಶಾಸಕರ ಅನುದಾನ) ಎಂ.ಪಿ.ಎಲ್.ಎ.ಡಿ.ಪಿ. (ಲೋಕಸಭಾ ಸದಸ್ಯರ

ಅನುದಾನ) ನಬಾರ್ಡ್ ಯೋಜನೆಯಡಿಯಲ್ಲಿ ಅಭಿವೃದ್ಧಿ ಹಾಗೂ ದುರಸ್ತಿ ಕಾರ್ಯವನ್ನು ಕೈಗೊಂಡು ಪೂರ್ಣಗೊಳಿಸಿದೆ. ಪ್ರಸ್ತುತ 2010–11ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಕೆಳಕಂಡ ಯೋಜನೆಗಳಡಿ ರಸ್ತೆ ನಿರ್ವಹಣೆ ಅಭಿವೃದ್ಧಿಗಾಗಿ ಅನುದಾನ ಒದಗಿಸಲಾಗಿದೆ.

ಲೆಕ್ಕಶೀರ್ಷಿಕೆ/ಯೋಜನೆ	ಒದಗಿಸಿದ ಅನುದಾನ
3054– ಸಿಎಂಜಿಎಸ್‌ವೈ (Non SDP)	50.00
5054– ಗ್ರಾಮೀಣ ಸಂಪರ್ಕ– ಸಾಮಾನ್ಯ	7.33
3054– ಸಿಎಂಜಿಎಸ್‌ವೈ– ಯೋಜನೇತರ (ಹೆಚ್ಚುವರಿ ಕಾಮಗಾರಿಗಾಗಿ)	96.80

2010–11ನೇ ಸಾಲಿನಲ್ಲಿ ಜಿ.ಪಂ.ಗೆ ಒದಗಿಸಿರುವ ಅನುದಾನಕ್ಕೆ ಅನುಗುಣವಾಗಿ ಹಾಗೂ ಲೆಕ್ಕ ಶೀರ್ಷಿಕೆವಾರು ನಿಯಮಾವಳಿಗಳನ್ವಯ ರಸ್ತೆ ಕಾಮಗಾರಿಗಳನ್ನು ಜಿ.ಪಂ. ಮತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಇ) 2009–10ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಮತಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮೀಣ ಭಾಗದ ರಸ್ತೆಗಳಿಗೆ ನಿಗದಿಪಡಿಸಿ, ಬಿಡುಗಡೆ ಮಾಡಿದ ಹಾಗೂ ವೆಚ್ಚದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಲೆಕ್ಕಶೀರ್ಷಿಕೆ ಯೋಜನೆ	ನಿಗದಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ/ವೆಚ್ಚ	2009– 10 ನೇ ಸಾಲಿನಲ್ಲಿ ಅಭಿವೃದ್ಧಿ ಪಡಿಸಿದ ಉದ್ದ (ಕಿ.ಮೀ)
1.	3054– ಸಿಎಂಜಿಎಸ್‌ವೈ	24.73	24.73	2.00
2.	5054 ರಸ್ತೆ ಮತ್ತು ಸೇತುವೆ	50.00	50.00	2.60
3.	5054– ಟಿಎಸ್‌ಪಿ ರಸ್ತೆಗಳು	8.13	8.13	1.50
4.	5054– ಎಸ್‌ಸಿಪಿ ರಸ್ತೆಗಳು	3.59	3.59	1.00
5.	ಸುವರ್ಣ ಗ್ರಾಮ ರಸ್ತೆಗಳು	172.99	12.11	8.00
6.	ಶಾ.ಸ್ಥ.ಪ್ರ.ಅ.ಯೋಜನೆ	80.00	60.00	2.50
7.	ಸಂ.ಸ.ಸ್ಥ.ಪ್ರ.ಅ	11.00	8.50	2.20
8.	ನಬಾರ್ಡ್ ರಸ್ತೆಗಳು	62.00	0.00	0.00
	ಒಟ್ಟು	**412.44**	**167.06**	**19.80**